19.12.2024
66

<u>ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಡಾ.ತಳವಾರ ಸಾಬಣ್ಣ ಇವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಮಾನ್ಯ ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಹಾಗೂ ಜೀವನೋಪಾಯ ಸಚಿವರ ಉತ್ತರ.</u>

ವಿಷಯ:- ರಾಜ್ಯಾದ್ಯಂತ ಜಿಲ್ಲಾ ಆಸ್ಪತ್ರೆ ಮತ್ತು ವೈದ್ಯಕೀಯ ಶಿಕ್ಷಣ ಸಂಸ್ಥೆಗಳಲ್ಲಿ ವೈದ್ಯರುಗಳ ನಿರ್ಲಕ್ಷ್ಯ ಹಾಗೂ ದೋಷಪೂರಿತ ಔಷಧಿಗಳ ಬಳಕೆಯಿಂದ ಬಾಣಂತಿಯರು ಮತ್ತು ರೋಗಿಗಳ ಸಾವು ನೋವುಗಳು ಹೆಚ್ಚುತ್ತಿವೆ. ಇದಕ್ಕೆ ಪೂರಕವೆಂಬಂತೆ ಕಾರವಾರ ವೈದ್ಯಕೀಯ ಶಿಕ್ಷಣ ಸಂಸ್ಥೆಯ ವೈದ್ಯಕೀಯ ಅಧೀಕ್ಷಕರ ಹುದ್ದೆಗೆ ಅರ್ಹತೆ ಇಲ್ಲದವರನ್ನು ನೇಮಕ ಮಾಡಲಾಗಿದೆ ಎಂದು 'ಭಾರತ ವೈಭವ' ದಿನಪತ್ರಿಕೆಯಲ್ಲಿ ವರದಿಯಾಗಿದೆ. ಉತ್ತರ ಕನ್ನಡ ಜಿಲ್ಲೆಯ ವ್ಯಾಪ್ತಿಯಲ್ಲಿ 12 ತಾಲೂಕುಗಳು ಬರುತ್ತಿದ್ದು, ಸಾಕಷ್ಟು ಬೆಟ್ಟಗುಡ್ಡಗಳು, ಹೆಚ್ಚಿನ ಕರಾವಳಿ ಪ್ರದೇಶ ಮತ್ತು ಅರಣ್ಯ ಪ್ರದೇಶದಿಂದ ಕೂಡಿದ ಜಿಲ್ಲೆಯಾಗಿದೆ. 2016ರಲ್ಲಿ ಕಾರವಾರದಲ್ಲಿ ವೈದ್ಯಕೀಯ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಲಾಗಿದೆ. ಸ್ವಂತ ಕಟ್ಟಡ ಇಲ್ಲದ ಕಾರಣ ಜಿಲ್ಲಾ ಆಸ್ಪತ್ರೆಯಲ್ಲೇ ವೈದ್ಯಕೀಯ ಕಾಲೇಜು ಕಾರ್ಯಾರಂಭ ಮಾಡಿತು. ಈ ಸಂಸ್ಥೆಗೆ ಸರಕಾರಿ ಜಿಲ್ಲಾ ಆಸ್ಪತ್ರೆಯ ಸರ್ಜನ್ ಆಗಿದ್ದ ಡಾ. ಶಿವಾನಂದ ಕುಡತಲ್ಕರ್ ಎಂಬುವವರನ್ನು ವೈದ್ಯಕೀಯ ಸಂಸ್ಥೆಯ ಹುದ್ದೆಗೆ ಅರ್ಹತೆ ಇಲ್ಲದಿದ್ದರೂ ಸಹ ವೈದ್ಯಕೀಯ ಶಿಕ್ಷಣ ಇಲಾಖೆಯು ವೈದ್ಯಕೀಯ ಅಧೀಕ್ಷಕ ಹುದ್ದೆಗೆ ಪ್ರಭಾರರನ್ನಾಗಿ ನೇಮಕ ಮಾಡಿತು. ನಂತರ 2018ರಲ್ಲಿ ಕಾರವಾರ ವೈದ್ಯಕೀಯ ಶಿಕ್ಷಣ ಸಂಸ್ಥೆ ಸ್ವಂತ ಕಟ್ಟಡವನ್ನು ಹೊಂದಿತು ಹಾಗೂ ಡಾ. ಶಿವಾನಂದ ಕುಡತಲ್ಕರ್ ಅರ್ಹತೆ ಇಲ್ಲದಿದ್ದರೂ ವೈದ್ಯಕೀಯ ಅಧೀಕ್ಷಕರ ಹುದ್ದೆಯಲ್ಲಿ ಇಲ್ಲಿಯವರೆಗೂ ಮುಂದುವರೆದಿರುತ್ತಾರೆ. ಇವರ ಆಡಳಿತದ ಕೋವಿಡ್ ಸಮಯದಲ್ಲಿ ಸಮರ್ಪಕ ನಿರ್ವಹಣೆ ಮಾಡದೇ ಅದೆಷ್ಟೋ ಜೀವಗಳು ಬಲಿಯಾಗಿವೆ. ಶ್ರೀಮತಿ ಗೀತಾ ಬಾಣಲಕರ್ ಗರ್ಭಿಣಿ ಸೂಕ್ತ ಚಿಕಿತ್ಸೆ ಸಿಗದೇ ಈ ಸಂಸ್ಥೆಯಲ್ಲಿ ಮೃತಪಟ್ಟಾಗ ಕಾರವಾರ ಬಂದ್ ಮಾಡಿ ಡಾ. ಶಿವಾನಂದ ಕುಡತಲ್ಕರ್ ಅವರನ್ನು ವಜಾ ಮಾಡುವಂತೆ ಪಕ್ಷತೀತವಾಗಿ ಹೋರಾಟ ಮಾಡಲಾಗಿತ್ತು. ಜಿಲ್ಲೆಯಲ್ಲಿ ಸಮುದ್ರ, ರಸ್ತೆ ತಿರುವು ಮತ್ತು ರಾಷ್ಟ್ರೀಯ ಹೆದ್ದಾರಿಗಳ ಕಾರಣದಿಂದ ಅಪಘಾತಗಳು ಹೆಚ್ಚಾಗುತ್ತಿವೆ. ಅದರ ಸಮರ್ಪಕ ಚಿಕಿತ್ಸೆ ಇಲ್ಲ ಎನ್ನುತ್ತಾರೆ ಸ್ಥಳೀಯ ಜನರು ರಾಷ್ಟ್ರೀಯ ವೈದ್ಯಕೀಯ ಆಯುಕ್ತಾಲಯದ ಅಭಿಪ್ರಾಯದಂತೆ ಕಾರವಾರ ವೈದ್ಯಕೀಯ ಶಿಕ್ಷಣ ಸಂಸ್ಥೆಯ ಪ್ರಸ್ತುತ ಇರುವ ವೈದ್ಯಕೀಯ ಅಧೀಕ್ಷಕರು ಆ ಹುದ್ದೆಗೆ ಅರ್ಹತೆ ಇಲ್ಲ ಎಂದು ಪತ್ರಿಕೆಯಲ್ಲಿ ವರದಿಯಾಗಿದೆ. ಈ ಹಿನ್ನಲೆಯಲ್ಲಿ, ಉತ್ತರ ಕನ್ನಡ ಜನರ ಜೀವನಾಡಿಯಾಗಿರುವ ಕಾರವಾರ ವೈದ್ಯಕೀಯ ಶಿಕ್ಷಣ ಸಂಸ್ಥೆಗೆ ಅರ್ಹತೆ ಇರುವ ಸೂಕ್ತ ವೈದ್ಯಕೀಯ ಅಧೀಕ್ಷಕರನ್ನು ನೇಮಕ ಮಾಡಬೇಕೆಂದು ಮಾನ್ಯ ವೈದ್ಯಕೀಯ ಶಿಕ್ಷಣ ಮಂತ್ರಿಯವರನ್ನು ಈ ಮೂಲಕ ಒತ್ತಾಯಿಸುತ್ತೇನೆ.

********

ಉತ್ತರ:-

ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯನ್ನು 2016ರಲ್ಲಿ ಪ್ರಾರಂಭಿಸಲಾಗಿದ್ದು, ಸದರಿ ಸಂಸ್ಥೆಗೆ ಅವಶ್ಯವಿರುವ ವಿವಿಧ ವಿಭಾಗಗಳ ಬೋಧಕ ಹುದ್ದೆಗಳು ಹಾಗೂ ಬೋಧಕೇತರ ಹುದ್ದೆಗಳನ್ನು ಸೃಜಿಸಿ ಆದೇಶಿಸಲಾಗಿದೆ. ಆದೇಶದ ಪ್ರತಿಗಳನ್ನು **ಅನುಬಂಧ-01**ರಲ್ಲಿ ಇರಿಸಿದೆ.

ಸದರಿ ಆದೇಶಗಳಲ್ಲಿ ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಗೆ ವೈದ್ಯಕೀಯ ಅಧೀಕ್ಷಕರ ಹುದ್ದೆಯು ಮಂಜೂರಾಗಿರುವುದಿಲ್ಲ. ಆದರೆ ರಾಷ್ಟ್ರೀಯ ವೈದ್ಯಕೀಯ ಪರಿಷತ್ತಿನ (ಪ್ರಸ್ತುತ ರಾಷ್ಟ್ರೀಯ ವೈದ್ಯಕೀಯ ಆಯೋಗ) ನಿಯಮಗಳನ್ವಯ ತಲೆ ಎಣಿಕೆಯ/ಕಾರ್ಯಬಾರ ವ್ಯವಸ್ಥೆಯ ದೃಷ್ಟಿಯಿಂದ ಸಂಸ್ಥೆಯಲ್ಲಿನ ವಿಭಾಗದ ಮುಖ್ಯಸ್ಥರು ಹಾಗೂ ಪ್ರಾಧ್ಯಾಪಕರನ್ನು ವೈದ್ಯಕೀಯ ಅಧೀಕ್ಷಕರ ಹುದ್ದೆಗೆ ನೇಮಿಸಲಾಗುತ್ತದೆ.

ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 86 ಎಂಪಿಎಸ್ 2019, ದಿನಾಂಕ:17-05-2019ರಲ್ಲಿ ಡಾ. ಶಿವಾನಂದ ಬಿ. ಕುಡ್ತಾರ್‌ಕರ್, ಜಿಲ್ಲಾ ಶಸ್ತ್ರಚಿಕಿತ್ಸಕರು/ವೈದ್ಯಕೀಯ ಅಧೀಕ್ಷಕರು, ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಬೋಧಕ ಆಸ್ಪತ್ರೆ (ಜಿಲ್ಲಾ ಆಸ್ಪತ್ರೆ), ಕಾರವಾರ ಇವರನ್ನು ವೈದ್ಯಕೀಯ ಅಧೀಕ್ಷಕರ ಹುದ್ದೆಯ ಅಧಿಕ ಪ್ರಭಾರದಲ್ಲಿ ನೇಮಿಸಲಾಗಿದೆ.

ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ದಿನಾಂಕ:03-09-2020ರಂದು ಶಸ್ತ್ರಚಿಕಿತ್ಸೆಯ ನಂತರ ಮೃತಪಟ್ಟಿರುವ ಶ್ರೀಮತಿ ಗೀತಾ ಶಿವಾನಂದ ಬಾನಾವಳಿಕರ ಇವರ ನಿಧನಕ್ಕೆ ಸಂಬಂಧಿಸಿದಂತೆ ಜಿಲ್ಲಾ ಗುಣಮಟ್ಟ ಖಾತ್ರಿ ಸಭೆಯನ್ನು ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ, ಜಿಲ್ಲಾ ಪಂಚಾಯತ್, ಉತ್ತರ ಕನ್ನಡ ಇವರು ದಿನಾಂಕ:12-09-2020ರಂದು ಸಭೆ ನಡೆಸಿ, ಸದರಿ ಮರಣದ ಬಗ್ಗೆ ವೈದ್ಯಕೀಯ ವರದಿಯನ್ನು ನೀಡುವ ಸಂಬಂಧ 05 ಜನ ತಜ್ಞ ವೈದ್ಯರುಗಳನ್ನೊಂಡ, ಮೆಡಿಕಲ್ **ಬೋರ್ಡ್‌ನ್ನು ರಚಿಸಿ 15 ದಿನಗಳೊಳಗಾಗಿ ವರದಿಯನ್ನು ನೀಡಲು ಸೂಚಿಸಿರುತ್ತಾರೆ. ಅದರಂತೆ, ಮೆಡಿಕಲ್ ಬೋರ್ಡ್‌ನ** ಸದಸ್ಯರು ಶಸ್ತ್ರಚಿಕಿತ್ಸೆ ಸಂದರ್ಭದಲ್ಲಿದ್ದ ವೈದ್ಯಾಧಿಕಾರಿಗಳ ಹಾಗೂ ಸಿಬ್ಬಂದಿಗಳನ್ನು ದಿನಾಂಕ:21-09-2020ರಂದು ವಿಚಾರಣೆ ನಡೆಸಿ ಸಲ್ಲಿಸಿರುವ ವಿಚಾರಣಾ ವರದಿಯಲ್ಲಿ ಈ ಕೆಳಕಂಡಂತೆ ಅಭಿಪ್ರಾಯ ನೀಡಿರುತ್ತಾರೆ (**ಅನುಬಂಧ-02**ರಲ್ಲಿ ಇರಿಸಿದೆ):-

1. ಶಸ್ತ್ರಚಿಕಿತ್ಸೆಯ ಸಮಯದಲ್ಲಿ ನಿರ್ಲಕ್ಷ್ಯ ಆಗಿದೆಯೇ?

ಶಸ್ತ್ರಚಿಕಿತ್ಸಾ ತಜ್ಞರಾದ ಡಾ.ರಾಮಾ ಹೆಗಡೆಯವರು ಎಲ್ಲಾ ದಾಖಲಾತಿಗಳು, ಹೇಳಿಕೆಗಳು ಹಾಗೂ ತಾತ್ಕಾಲಿಕ ಮರಣೋತ್ತರ ಪರೀಕ್ಷಾ ವರದಿಯನ್ನು ಗಮನಿಸಿ ಶಸ್ತ್ರಚಿಕಿತ್ಸಾ ಅವಧಿಯಲ್ಲಿ ಯಾವುದೇ ನಿರ್ಲಕ್ಷ್ಯ ಸಂಭವಿಸಿರುವ ಸಾಧ್ಯತೆ ಇಲ್ಲವೆಂದು ಅಭಿಪ್ರಾಯ ಪಟ್ಟಿರುತ್ತಾರೆ.

2. ಅನಸ್ತೇಶಿಯಾದ ಬಗ್ಗೆ ನಿರ್ಲಕ್ಷ್ಯ ಆಗಿದೆಯೇ ?

ರೋಗಿಗೆ ನೀಡಿರುವ ಅರವಳಿಕೆ ಔಷಧವು (ಇಂಜೆಕ್ಷನ್ ಅಟ್ರೋಪಿನ್ 0.2ಎಮ್ ಜಿ +ಇಂಜೆಕ್ಷನ್ ಡೈಜಿಫಾಮ್ ಎಮ್ ಜಿ) ಆಗಿರುವುದರಿಂದ ವಯಸ್ಕ ರೋಗಿಗೆ ಈ ಪ್ರಮಾಣವು ತುಂಬಾ ಕಡಿಮೆಯಾಗಿದ್ದು, ಈ ಔಷಧಗಳಿಂದ ಸಾವು ಸಂಭವಿಸುವ ಸಾಧ್ಯತೆಯು ಇಲ್ಲವೆಂದು ಅರವಳಿಕೆ ತಜ್ಞರಾದ ಡಾ. ರಾಜೇಶ ನಾಯಕ ರವರು ಅಭಿಪ್ರಾಯ ಪಟ್ಟಿರುತ್ತಾರೆ. ಅನಸ್ತೇಶಿಯಾ ನೀಡುವ ಮತ್ತು ನೀಡಿದ ನಂತರವು ಮಾನಿಟರ್‌ನ್ನು ಸರಿಯಾಗಿ ಮಾಡಿರುವುದರಿಂದ ಈ ಎರಡು ಹಂತಗಳಲ್ಲಿ ನಿರ್ಲಕ್ಷ್ಯ ಸಂಭವಿಸಿರುವ ಸಾಧ್ಯತೆ ಇಲ್ಲವೆಂದು ಎಲ್ಲಾ ಸದಸ್ಯರು ಅಭಿಪ್ರಾಯ ನೀಡಿದ್ದಾರೆ.

3. ಮರಣವನ್ನು ತಡೆಯಬಹುದಿತ್ತಾ?

ಒಂದು ರೋಗಿಗೆ ಶಸ್ತ್ರಚಿಕಿತ್ಸೆ ನಡೆಸುವ ಸಂದರ್ಭದಲ್ಲಿ ಎಲ್ಲಾ ಮುನ್ನೆಚ್ಚರಿಕೆ ಮತ್ತು ಮುಂಜಾಗ್ರತಾ ಕ್ರಮಗಳನ್ನು ಕೈಗೊಂಡ ನಂತರವು ಈ ಕೆಳಗಿನ ಕಾರಣಗಳಿಂದ ಸಾವು ಸಂಭವಿಸಬಹುದು.

1. Cardiogenic shock

ಅನಗತ್ಯವಾದ ಅತೀವ ಭಯದಿಂದ, Overreaction to a normal stimuli ಯಿಂದ ಸಾವು ಸಂಭವಿಸಬಹುದು.

2. Pulmonary embolism

ಮುಂದುವರೆದು, ಡಾ. ಶಿವಾನಂದ ಬಿ. ಕುಡ್ತಾರ್‌ಕರ್, ವೈದ್ಯಕೀಯ ಅಧೀಕ್ಷಕರು, ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಾರವಾರ ಇವರ ವಿರುದ್ಧ ಸರ್ಕಾರಕ್ಕೆ ಸಲ್ಲಿಕೆಯಾಗಿರುವ ದೂರುಗಳ ಬಗ್ಗೆ ವಿಚಾರಣೆ ನಡೆಸಿ ವರದಿ ಸಲ್ಲಿಸುವಂತೆ ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಇವರಿಗೆ ದಿನಾಂಕ:30-10-2024ರಂದು ಪತ್ರ ಬರೆಯಲಾಗಿದ್ದು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ನಿರ್ದೇಶಕರಿಂದ ವರದಿ ಸ್ವೀಕೃತವಾದ ನಂತರ ನಿಯಮಾನುಸಾರ ಪರಿಶೀಲಿಸಿ, ಕ್ರಮವಹಿಸಲಾಗುವುದು.

ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವೃಂದ ಮತ್ತು ನೇಮಕಾತಿ ನಿಯಮಗಳನ್ವಯ ವೈದ್ಯಕೀಯ ಅಧೀಕ್ಷಕರ ಹುದ್ದೆಯನ್ನು ಭರ್ತಿ ಮಾಡಲು ಈ ಕೆಳಕಂಡಂತೆ ಅವಕಾಶವನ್ನು ಕಲ್ಪಿಸಲಾಗಿದೆ:-

| Sl.No | Name of the Cadre | Academic qualification | Criteria for appointment |
|---|---|---|---|
| 06 | Medical Superintendent | As per NMC Norms | 1. Minimum Age shall be 50 years.<br>2. Five senior most Professors shall be shortlisted from Clinical departments only of the same institute.<br>3. Candidates for the post shall be selected from among the teaching faculty of the respective Government autonomous Medical Colleges/Super Specialty institute.<br>4. Must have completed 5 years of service |

ಡಾ. ಶಿವಾನಂದ ಬಿ. ಕುಡ್ತಾರ್‌ಕರ್, ವೈದ್ಯಕೀಯ ಅಧೀಕ್ಷಕರು, ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಕಾರವಾರ ಇವರನ್ನು ವೈದ್ಯಕೀಯ ಅಧೀಕ್ಷಕರ ಹುದ್ದೆಯಲ್ಲಿ ಹೆಚ್ಚುವರಿ ಪ್ರಭಾರದಲ್ಲಿ ನೇಮಿಸಿದ್ದು, ಕಾರವಾರ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ವೈದ್ಯಕೀಯ ಅಧೀಕ್ಷಕರ ಹುದ್ದೆಯನ್ನು ಭರ್ತಿ ಮಾಡುವ ಕುರಿತು ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ ಇವರಿಂದ ವರದಿ ಪಡೆದು, ಪರಿಶೀಲಿಸಿ, ನಿಯಮಾನುಸಾರ ವೈದ್ಯಕೀಯ ಅಧೀಕ್ಷಕರ ಹುದ್ದೆಯನ್ನು ಭರ್ತಿ ಮಾಡಲು ಕ್ರಮವಹಿಸಲಾಗುವುದು.

**ಸಂಖ್ಯೆ:ಎಂಇಡಿ 799 ಎಂಪಿಎಸ್ 2024.**

(ಡಾ. ಶರಣ ಪ್ರಕಾಶ ಆರ್. ಪಾಟೀಲ)
ವೈದ್ಯಕೀಯ ಶಿಕ್ಷಣ ಮತ್ತು ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ
ಹಾಗೂ ಜೀವನೋಪಾಯ ಸಚಿವರು